ಆ. ಹೌದು, ಅತೀವೃಷ್ಟಿಯಿಂದಾಗಿ ತನಿಕೊಳ್ಳ ಪ್ರವಾಸಿ ಕೇಂದ್ರದ ಆವರಣಗೋಡೆ ಮತ್ತು ಮುರಗೋಡ - ಇಂಚಲ ರಸ್ತೆಯಲ್ಲಿ ಸಿ.ಡಿ. ಹತ್ತಿರ ರಸ್ತೆ ಕತ್ತರಿಸಿದೆ, ಇವುಗಳ ದುರಸ್ತಿಗೆ ಜಿಲ್ಲಾಡಳಿತದಿಂದ ಕ್ರಮ ಕೈಗೊಳ್ಳಲಾಗುತ್ತಿದೆ.

ಇ. ಸದರಿ ಎರಡು ಕಾಮಗಾರಿಗಳ ಅನುಷ್ಠಾಕ್ಕಾಗಿ ರೂ. 3.00 ಲಕ್ಷಗಳ ಅಂದಾಜು ವೆಚ್ಚವನ್ನು ತಯಾರಿಸಲಾಗಿದ್ದು, ಸಾಕಷ್ಟು ಅನುದಾನ ಲಭ್ಯವಿದ್ದು, ಕಾಮಗಾರಿಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

ಚಾಮರಾಜನಗರ ತಾಲ್ಲೂಕ ಬೆಲ್ಲತ್ತಾ ಗ್ರಾಮದ ದರಕಾಸ್ತು ಜಮೀನು

890 (1090) - ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ): ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು ಚಂದಕವಾಡಿ ಹೋಬಳಿಯಲ್ಲಿ ಬರುವ ಬೆಲ್ಲತ್ತಾ ಪೋಡಿನ ಗಿರಿಜನರಿಗೆ ಸರ್ವೆ ನಂ. 184 ರಲ್ಲಿ ದರಖಾಸ್ತಿನ ಮೂಲಕ ನೀಡಿದ್ದ ಜಮೀನಿನ ವಿಸ್ತೀರ್ಣವೆಷ್ಟು? ಸದರಿ ಜಮೀನುಗಳಿಗೆ ಹದ್ದುಬಸ್ತು ಮಾಡಲಾಗಿದೆಯೇ? ಮಾಡಿರದೇ ಇದ್ದಲ್ಲಿ ಯಾವಾಗ ಮಾಡಲಾಗುವುದು. ಈ ಸರ್ವೆ ನಂಬರಿನಲ್ಲಿ ಜಮೀನು ಪಡೆದಿರುವ ಫಲಾನುಭವಿಗಳ ನಾಮಾಂಕಿತ ಸಹಿತ ವಿವರ ನೀಡುವುದು;

ಆ. ಈ ಜಮೀನುಗಳನ್ನು ಇತ್ತೀಚೆಗೆ ಭೂ ಕಬಳಿಕೆ ಮಾಡುತ್ತಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಯಾರಿಂದ ಭೂ ಕಬಳಿಕೆ ಯತ್ನ ನಡೆದಿದೆ. ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು.

ಇ. ಈ ಸಂಬಂಧವಾಗಿ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಾಗಿದೆಯೆ-ದಾಖಲಾಗಿದ್ದಲ್ಲಿ ಕೈಗೊಂಡಿರುವ ಕ್ರಮಗಳಾವುವು?

ಈ. ಈ ಸಂಬಂಧದಲ್ಲಿ ತಾಲ್ಲೂಕು ತಹಸೀಲ್ದಾರ್ ರವರು ಕೈಗೊಂಡಿರುವ ಕ್ರಮಗಳೇನು? ಇಲ್ಲದೇ ಇದ್ದಲ್ಲಿ ಕಾರಣವೇನು. ವಿವರ ನೀಡುವುದು.

ಉ. ಇತ್ತೀಚೆಗೆ ಶ್ರೀ ಚಿಳಿಗಿರಿರಂಗನಬೆಟ್ಟದಲ್ಲಿ ನಡೆದ ಮಿನಿ ಸಚಿವ ಸಂಪುಟದ ಸಭೆಯಲ್ಲಿ ಗಿರಿಜನರ ಅಭಿವೃದ್ಧಿಗಾಗಿ ಕೈಗೊಂಡ ಕ್ರಮದಡಿಯಲ್ಲಿ ಏನಾದರೂ ಸಾಧನೆ ಮಾಡಲಾಗಿದೆಯೇ? ವಿವರ ಕೊಡುವುದು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು, ಚಂದಕವಾಡಿ ಹೋಬಳಿಯಲ್ಲಿ ಬರುವ ಬಿಲ್ಲತ್ತಾ ಪೋಡಿನ ಗಿರಿಜನರಿಗೆ, ಜ್ಯೋತಿಗೌಡನಪುರ ಸರ್ವೆ ನಂ. 184 ರಲ್ಲಿ ದರಖಾಸ್ತು ಮೂಲಕ ಜಮೀನು ಮಂಜೂರು ಮಾಡಿರುವುದಿಲ್ಲ. ಸದರಿ ಜಮೀನಿಗೆ ಹದ್ದುಬಸ್ತು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಸರ್ವೆ ನಂಬರಿನಲ್ಲಿ ಇತರೆ 45 ಜನರಿಗೆ 180 ಎಕರೆ ಜಮೀನು ಈ ಕೆಳಕಂಡಂತೆ ಮಂಜೂರಾಗಿರುತ್ತದೆ.

ಕ್ರ. ಸಂ.	ಹೆಸರು	ಸರ್ವೆ ನಂ.	ವಿಸ್ತೀರ್ಣ ಎ-ಗು	ಜುಮ್ಲಾ ವಿಸ್ತೀರ್ಣ ಎ - ಗು
1	2	3	4	5
1.	ರಂಗಶೆಟ್ಟಿ ಬಿನ್. ಬಸವಶೆಟ್ಟಿ	184:1	4-00	4-00
2.	ದಾಸಶೆಟ್ಟಿ	184:2	4-00	4-00

1	2	3	4	5
3.	ಚಿಕ್ಕಶೆಟ್ಟಿ ಬಿನ್. ಅಂಕಶೆಟ್ಟಿ	184:3ಬಿ	7-00	7-00
4.	ಎಡಚಮಾದನ ರಾಮ	184:4	4-00	4-00
5.	ಲಕ್ಷ್ಮಣನ ಮಗ ಸಣ್ಣ	184:5	4-00	4-00
6.	ಕ್ಯಾತನ ಮಗ ಸಿದ್ದಶೆಟ್ಟಿ	184:7	4-00	4-00
7.	ಮಾದಶೆಟ್ಟಿ	184:9	4-00	4-00
8.	ಬಸವಶೆಟ್ಟಿ	184:11	4-00	4-00
9.	ಸಿದ್ದಶೆಟ್ಟಿ	184:14	6-00	6-00
10.	ಸಿದ್ದ (ಸಿದ್ದರಾಮನಾಯ್ಕ)	184:17	4-00	4-00
11.	ಮೊತ್ತಮಾದ	184:18	4-00	4-00
12.	ಪುಟ್ಟಮಾದಶೆಟ್ಟಿ	184:19	4-20	4-20
13.	ತಮ್ಮಡಿಸಿದ್ದಶೆಟ್ಟಿ	184:21ಎ	6-00	6-00
14.	ಚಿನ್ನಶೆಟ್ಟಿ ಬಿನ್.ಅಂಕಶೆಟ್ಟಿ	184:28	5-00	5-00
15.	ಚಿಕ್ಕಮಾದಶೆಟ್ಟಿ	184:29	4-00	4-00
16.	ರಾಮಶೆಟ್ಟಿ	184:32	4-00	4-00
17.	ಬಿಳಿಗಿರಿರಂಗ	184:36,37	4-00	4-00
18.	ತುಲಾಗಿರಿಗೌಡ	184:39	4-00	4-00
19.	ಮಾರಶೆಟ್ಟಿ	184:40	4-00	4-00
20.	ನಾಗನಾಯ್ಕ	184:43	4-30	4-30
21.	ಅಂಕಶೆಟ್ಟಿ			
22.	ಸಿದ್ಧನಾಯ್ಕ	184	10-00	10-00
23.	ಚಾಮುಂಡೇಗೌಡ	336	2-26	2-26
24.	ಚಿಕ್ಕಮಾದಯ್ಯ	339	2-26	2-26
25.	ಮುದ್ದನಾಯ್ಕ	340	4-00	4-00
26.	ಕೊಳವೆರಂಗನಾಯ್ಕ	341	3-20	3-20
27.	ಬಸಪ್ಪ	342	2-30	3-20
28.	ಮೊಳ್ಳಿ ಜೋಗಿ	343	3-14	3-14
29.	ಕೆಂಪ	344	2-00	2-00
30.	ಹೆಚ್.ಆರ್. ಬಿಳಿಗಿರಿರಂಗಯ್ಯ	345	4-36	4-36
31.	ಮಾರಶೆಟ್ಟಿ ಹೆಂಡ್ತಿ ನಂಜಮ್ಮ	346	2-00	2-00
32.	ರಂಗಶೆಟ್ಟಿ ಮಗ ಬಸವಶೆಟ್ಟಿ	347	2-00	2-00
33.	ಕ್ಯಾತನ ಮಗ ಸಿದ್ದಶೆಟ್ಟಿ	348	4-00	4-00
34.	ಕಾಳಶೆಟ್ಟಿ ಮಗ ಮಾರಶೆಟ್ಟಿ	349	4-00	4-00
35.	ಕಾಳಶೆಟ್ಟಿ ಮಗ ಸಿದ್ದಶೆಟ್ಟಿ	350	4-00	4-00
36.	ಬಸವಯ್ಯನ ಮಗ ಮರಕೂಸಯ್ಯ	351	4-00	4-00

1	2	3	4	5
37.	ಬಸವಯ್ಯನ ಮಗ ಮರಿಮಾದಯ್ಯ	352	4-00	4-00
38.	ರಾಚಯ್ಯನ ಮಗ ಸಿದ್ದಯ್ಯ	353	4-00	4-00
39.	ಮುತ್ತಯ್ಯನ ಮಗ ದಾಸಪ್ಪ	354	4-00	4-00
40.	ಬಸವಯ್ಯನ ಮಗ ಮಾದಯ್ಯ	355	4-00	4-00
41.	ಸಿದ್ದಶೆಟ್ಟಿ ಅಳಿಯ ಸಿದ್ದಶೆಟ್ಟಿ	356	4-00	4-00
42.	ಮಾರಶೆಟ್ಟಿ ಮಗ ಸಿದ್ದಶೆಟ್ಟಿ	357	4-00	4-00
43.	ನಂಜಯ್ಯನ ಮಗ ಬಸವಯ್ಯ	358	3-24	3-24
44.	ಅಫೀಸ್ ಖಾಸ್ ಸಾಹೇಬರವರ ಮಗ ಹೈದರಾಲಿ ಖಾನ್	359	4-00	4-00
45.	ಸೈಯದ್ ಅಹಮ್ಮದ್ ಸಾಹೇಬರವರ ಮಗ ಸೈಯದ್ ಅಹಮ್ಮದ್ ಸರ್ವೆ ನಂ.184 ರಲ್ಲಿ ಮೇಲ್ಕಂಡ 45 ಜನರಿಗೆ ಮಂಜೂರಾಗಿಯಾಗಿದ್ದು, ಮಂಜೂರಿಯಂತೆ ಹೊಸ ಸರ್ವೆ ನಂ. 339 ರಿಂದ 382 ರವರೆಗೆ ದುರಸ್ಥಿಯಾಗಿರುತ್ತದೆ.	360	4-00	4-00

ಆ. ಇಲ್ಲ, ಉದ್ಭವಿಸುವುದಿಲ್ಲ.

ಇ. ಈ ಸಂಬಂಧವಾಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುವುದಾಗಿ ತಿಳಿದು ಬಂದಿದ್ದು, ಇದು ಖಾಸಗಿ ವ್ಯಕ್ತಿಗಳ ನಡುವಣ ವ್ಯಾಜ್ಯಕ್ಕೆ ಸಂಬಂಧಿಸಿದ್ದಾಗಿರುತ್ತದೆ.

ಈ. ಈ ಬಗ್ಗೆ ಇದು ಖಾಸಗಿ ಜಮೀನಿನ ವ್ಯಾಜ್ಯವಾಗಿರುವುದರಿಂದ, ಪ್ರಶ್ನೆ ಉದ್ಭವಿಸುವುದಿಲ್ಲ.

ಉ. ಅರಣ್ಯ ಜಮೀನುಗಳಲ್ಲಿ ಬೇಸಾಯಕ್ಕೆ ಮತ್ತು ವಸತಿಗೆ ಅರಣ್ಯ ಜಮೀನುಗಳನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರದ ಅನುಮತಿ ಅವಶ್ಯಕತೆ ಇದೆ. ಈ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು ಅನುಮತಿ ದೊರೆತ ನಂತರ ಅರಣ್ಯ ಇಲಾಖೆಯ ಜಮೀನುಗಳ ಬಗ್ಗೆ ಕ್ರಮವಹಿಸಲಾಗುವುದು.

ಹೊಸದಾಗಿ ತಾಲ್ಲೂಕು ಕೇಂದ್ರಗಳ ರಚನೆ

892 (1452) - ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಹೊಸದಾಗಿ ತಾಲ್ಲೂಕು ಕೇಂದ್ರಗಳನ್ನು ರಚನೆ ಮಾಡುವ ಉದ್ದೇಶ ಹೊಂದಲಾಗಿದೆಯೇ; ಯಾವ ಯಾವ ಕ್ಷೇತ್ರಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಮಾಡಲು ಉದ್ದೇಶಿಸಲಾಗಿದೆ: ವಿವರ ನೀಡುವುದು.

ಆ. ಹೊಸ ತಾಲ್ಲೂಕು ಕೇಂದ್ರಗಳನ್ನು ರಚನೆ ಮಾಡಲು ಯಾವ ಮಾನದಂಡವನ್ನು ಅನುಸರಿಸಲಾಗಿದೆ;

ಇ. ಎರಡು ಜಿಲ್ಲೆ ಮತ್ತು ಎವಡು ತಾಲ್ಲೂಕುಗಳ ವ್ಯಾಪ್ತಿಗೊಳಪಟ್ಟ ಕ್ಷೇತ್ರಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಪರಿವರ್ತನೆ ಮಾಡುವುದು ಅಭಿವೃದ್ಧಿ ದೃಷ್ಟಿಯಿಂದ ಅವಶ್ಯಕವಲ್ಲವೆ;